

ಬೀಡ್ಸ್ ನೆಕ್ಲೇಸ್, ರೋಪ್, ಕಾಲರ್ ನೆಕ್ಲೇಸ್, ಮಲ್ಟಿ ಲೇಯರ್ ನೆಕ್ಲೇಸ್‌ಗಳೂ ಬಟ್ಟೆಯಿಂದಲೇ ತಯಾರಾಗುತ್ತವೆ. ಬಟ್ಟೆಯ ತುಂಡು ತೆಗೆದುಕೊಂಡು ಒಳಗಡೆ ಹತ್ತಿ ತುಂಬಿ ದಾರದಿಂದ ಬೀಡ್ಸ್ ಹೊಲಿದರೆ ನೆಕ್ಲೇಸ್ ತಯಾರಾಗುತ್ತದೆ. ಇದೇ ಮಹಿಳೆಯರ ಮೆಚ್ಚಿನ ಬೀಡ್ಸ್ ನೆಕ್ಲೇಸ್. ಲಂಗದ ಲಾಡಿಯಂತೇ ಚಂದದ ಪ್ರಿಂಟ್ ಇರುವ ಬಟ್ಟೆಯನ್ನು ಉದ್ದಕ್ಕೆ ಹೊಲಿದುಕೊಂಡು ಒಳಗಡೆ ಪ್ಲಾಸ್ಟಿಕ್ ಬೀಡ್ಸ್‌ಗಳನ್ನು ತುಂಬಿ ಪ್ರತಿ ಬೀಡ್ಸ್ ಸುತ್ತ ಹೊಲಿಗೆ ಹಾಕಲಾಗುತ್ತದೆ. ಇದು ತುಂಬ ಸುಲಭವಾಗಿ ಮನೆಯಲ್ಲಿಯೇ ತಯಾರಿಸಬಹುದಾದ ಫ್ಯಾಬ್ರಿಕ್ ನೆಕ್ಲೇಸ್.

ಕಾರ್ಡ್‌ಬೋರ್ಡ್ ತುಂಡಿನ ಸುತ್ತ ಬಟ್ಟೆ ಹೊಲಿದು ಕುಂದನ್, ಮುತ್ತು, ಹರಳುಗಳನ್ನು ಅಂಟಿಸಿ ಚಂದದ ಫ್ಯಾಬ್ರಿಕ್ ನೆಕ್ಲೇಸ್ ಮಾಡಬಹುದು. ಪಾರ್ಟಿಗಳಿಗೆ ಆಯ್ಕೆ ಮಾಡುವ ಬಟ್ಟೆಯ ಬಣ್ಣಕ್ಕೆ ಮ್ಯಾಚ್ ಮಾಡಿ ನೆಕ್ಲೇಸ್ ಧರಿಸಬಹುದು. ನಿಯಾನ್ ಫ್ರಿಂಜ್ ನೆಕ್ಲೇಸ್‌ಗಳು ಫ್ಯಾಷನ್ ಶೋಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಕತ್ತಿನಗುಂಟ ಬರುವ ರೌಂಡ್ ಫ್ಯಾಬ್ರಿಕ್‌ಗೆ ಅಲ್ಲಲ್ಲಿ ನೇತಾಡುವ ದಾರದ ವಿನ್ಯಾಸ ಆಧುನಿಕ ಲುಕ್ ಕೊಡುತ್ತದೆ. ಗಂಟು ಹಾಕಿದ ರಚನೆಯುಳ್ಳ ನಾಟ್ ನಿಯಾನ್ ನೆಕ್ಲೇಸ್‌ಗಳು ಪಾರ್ಟಿ ವೇರ್ ಎನಿಸಿವೆ.

## ಫ್ಯಾಬ್ರಿಕ್ ಕಿವಿಯೋಲೆ

ಒಡವೆಗಳ ಸಂಗ್ರಹದಲ್ಲಿ ಯಾವತ್ತಿಗೂ ಮೊದಲ ಸ್ಥಾನ ಕಿವಿಯೋಲೆ. ಕಾಟನ್, ಸಿಲ್ಕ್, ವೆಲ್ವೆಟ್ ಬಟ್ಟೆಯ ಕಿವಿಯೋಲೆ ಚಂದದ ಲುಕ್ ಕೊಡುತ್ತದೆ. ಬಟ್ಟೆಯ ಮೇಲೆ ಕುಂದನ್, ಬೀಡ್ಸ್, ಮಣಿ ಅಥವಾ ಫ್ಯಾಬ್ರಿಕ್ ಪೇಂಟ್ ಮಾಡಿ ಓಲೆಗೆ ಇನ್ನಷ್ಟು ಮೆರುಗು ಕೊಡಲಾಗುತ್ತದೆ. ಸ್ಟಡ್ಸ್, ಹ್ಯಾಂಗಿಂಗ್, ಜುಮುಕಿ, ಹೂಪ್ಸ್, ಚಾಂದೇಲಿಯರ್ ಎಲ್ಲ ಬಗೆಗಳೂ ಲಭ್ಯ.

ಧರಿಸಿದ ಉಡುಪಿನ ಬಣ್ಣ ಮತ್ತು ಪ್ರಿಂಟ್‌ಗೆ ಮ್ಯಾಚ್ ಆಗುವ ಅಂತಹುದೇ ಕಿವಿಯೋಲೆ ಆಯ್ಕೆ ಮಾಡಬಹುದು. ಮನೆಯಲ್ಲಿಯೇ ಜೀನ್ಸ್ ಬಟ್ಟೆ ಬಳಸಿ ಸುಲಭವಾಗಿ ಕಿವಿಯೋಲೆಯನ್ನು ನೀವೇ ತಯಾರಿಸಬಹುದು. ಮೊದಲಿಗೆ ಅಂಗಡಿಯಿಂದ ಹ್ಯಾಂಗಿಂಗ್ ಹುಕ್, ಫ್ಯಾಬ್ರಿಕ್ ಗ್ಲ್ಯೂ ತಂದಿಟ್ಟುಕೊಳ್ಳಿ. ನಂತರ ಜೀನ್ಸ್ ಬಟ್ಟೆಯನ್ನು ನಿಮಗೆ ಬೇಕಾದ ಆಕಾರದಲ್ಲಿ ಕತ್ತರಿಸಿ ಒಂದು ದಪ್ಪ ರಟ್ಟಿನ ತುಂಡಿಗೆ ಫ್ಯಾಬ್ರಿಕ್ ಗ್ಲೂ ಬಳಸಿ ಅಂಟಿಸಿಕೊಳ್ಳಿ. ಜೀನ್ಸ್ ಬಟ್ಟೆ ತುಂಡಿನ ಮೇಲೆ ಕುಂದನ್ ಅಂಟಿಸಿ. ಎಲ್ಲವನ್ನೂ ಒಟ್ಟು ಸೇರಿಸಿ, ಅಂಗಡಿಯಿಂದ ಕೊಂಡು ತಂದ ಹ್ಯಾಂಗಿಂಗ್ ಹುಕ್‌ಗೆ ಜೋಡಿಸಿ. ಉಡುಪಿಗೆ ತಕ್ಕಂತೆ ಕಿವಿಯೋಲೆ ತಯಾರಿಸಿ ಧರಿಸಬಹುದು.

## ಬ್ರೇಸ್ಲೆಟ್ ಮತ್ತು ಬಳೆಗಳು

ಬಳೆಗಳ ತಯಾರಿಕೆಯಲ್ಲಿ ಕಾಟನ್, ರೇಷ್ಮೆ, ಸಿಂಥೆಟಿಕ್ ಬಟ್ಟೆಗಳನ್ನು ಬಳಸಲಾಗುತ್ತದೆ. ನಿಮ್ಮ ಬಳಿ ಇರುವ ಹಳೆಯ ಗಾಜಿನ ಬಳೆ ಮತ್ತು ಪ್ಲಾಸ್ಟಿಕ್ ಬಳೆಗಳಿಗೆ ಚಂದದ ಬಟ್ಟೆಯ ಹೊದಿಕೆ ಮಾಡಿ ಹೊಸ ಬಳೆಗಳನ್ನು ಮಾಡಬಹುದು. ಬಟ್ಟೆಯನ್ನು ಉದ್ದಕ್ಕೆ ಕತ್ತರಿಸಿ ಒಂದು ಬದಿ ಮಾತ್ರ ಹೊಲಿದುಕೊಂಡು ಮಧ್ಯಭಾಗದಲ್ಲಿ ಹಳೇ ಬಳೆ ತೂರಿಸಿ. ನಂತರ ಮತ್ತೊಂದು ಬದಿಗೆ ಒಂದು ಸ್ಟಿಚ್ ಹಾಕಿದರೆ ಸಾಕು. ಎರಡೇ ನಿಮಿಷದಲ್ಲಿ ಹೊಸತಾದ ಮ್ಯಾಚಿಂಗ್ ಬಳೆ ಸಿದ್ಧವಾಗುತ್ತದೆ. ಇಲಾಸ್ಟಿಕ್ ಬಳಸಿ ಇದೇ ವಿಧಾನದಲ್ಲಿ ಬ್ರೇಸ್ಲೆಟ್ ಮಾಡಬಹುದು.

ಮೂರು ಬೇರೆ ಬೇರೆ ಬಣ್ಣದ ಬಟ್ಟೆಯ ಉದ್ದನೆಯ ತುಂಡು ತೆಗೆದುಕೊಂಡು ಜಡೆಯಂತೆಯೇ ಹೆಣೆಯಿರಿ. ಕೊನೆಯಲ್ಲಿ ಫ್ಯಾಬ್ರಿಕ್ ಗ್ಲೂ ಬಳಸಿ ಬಟ್ಟೆಯ ತುಂಡು ಅಂಟಿಸಿ ಸಣ್ಣದೊಂದು ಗಂಟು ಹಾಕಿದರೆ ಬ್ರೇಸ್ಲೆಟ್ ತಯಾರು. ನಿಮ್ಮಿಷ್ಟದ ಹರಳು, ಮುತ್ತು, ಬೀಡ್ಸ್ ಬಳಸಿ 'ಫ್ರೆಂಡ್ ಶಿಪ್ ಬ್ಯಾಂಡ್' ಮಾಡಿ ಫ್ರೆಂಡ್ ಶಿಪ್ ಡೇ ಗೆ ಕೊಡುವ ಮೂಲಕ ದುಪ್ಪಟ್ಟು ಖುಷಿ ಪಡೆಯಬಹುದು. ನಿಯಾನ್ ಬ್ರೇಸ್ಲೆಟ್‌ಗಳು ಇಷ್ಟವಾದ ಬಣ್ಣ ಮತ್ತು ವಿನ್ಯಾಸಗಳಲ್ಲಿ ಸಿಗುತ್ತವೆ. ಸೂಕ್ಷ್ಮ ಕಸೂತಿಯಲ್ಲಿ ತಯಾರಿಸಲಾದ ಬಟ್ಟೆಯ ಬ್ರೇಸ್ಲೆಟ್ ಯಾವ ಲೋಹಕ್ಕೂ ಕಡಿಮೆಯಿಲ್ಲ ಎನ್ನುವಂತಹ ನೋಟ ಹೊಂದಿದೆ.

## ಫ್ಯಾಬ್ರಿಕ್ ಆಂಕ್ಲೆಟ್

ಲೇಸ್, ಮಿರರ್‌ಗಳಿಂದ ಹೊಳೆಯುವ ಚಂದದ ಫ್ಯಾಬ್ರಿಕ್ ಕಾಲ್ಗೆಜ್ಜೆಗಳು ಮಾರುಕಟ್ಟೆಯಲ್ಲಿ ಹೊಳೆಯುತ್ತಿವೆ. ಲೋಹದ ಅಲರ್ಜಿ ಇರುವವರು





ಈ ತರಹದ ಬಟ್ಟೆಯ ಕಾಲ್ಗೆಜ್ಜೆ ಧರಿಸಿ ಸಂಭ್ರಮಿಸಬಹುದು. ಇದರಲ್ಲಿ ಮಲ್ಟಿ ಲೇಯರ್ ಆಂಕ್ಲೆಟ್‌ಗಳು ಸಿಗುತ್ತವೆ. ಗಾಗ್ರಾ ಚೋಲಿ, ಲೆಹೆಂಗಾ ಧರಿಸಿದಾಗ ಅದೇ ಬಣ್ಣದ ಗ್ರ್ಯಾಂಡ್ ಫ್ಯಾಬ್ರಿಕ್ ಆಂಕ್ಲೆಟ್ ಧರಿಸಿ ಸಂಭ್ರಮ ಪಡಬಹುದು.

## ಹೇರ್ ಆಕ್ಸೆಸರೀಸ್

ಕೂದಲಿಗೆ ರಬ್ಬರ್ ಬ್ಯಾಂಡ್, ಹೇರ್ ಬ್ಯಾಂಡ್‌ಗಳಾಗಿ ಬಟ್ಟೆಗಳನ್ನು ಬಳಸಲಾಗುತ್ತದೆ. ಮಕ್ಕಳಿಗಾಗಿ ಹೂವಿನಾಕಾರದ ಕ್ಲಿಪ್, ಫ್ಲವರ್ ರಬ್ಬರ್ ಬ್ಯಾಂಡ್‌ಗಳನ್ನು ಸುಲಭವಾಗಿ ತೊಳೆದು ಬಳಸಬಹುದು. ಗೋಲ್ಡನ್ ಬಣ್ಣದ ಫ್ಯಾಬ್ರಿಕ್‌ನಿಂದ ತಯಾರಾದ ಕ್ರೌನ್, ಕುಂದನ್, ಹರಳುಗಳಿಂದ ಅಲಂಕರಿಸಿದ ಹೇರ್ ಬ್ಯಾಂಡ್, ಮಾಂಗ್‌ಟೀಕಾ ಗ್ರ್ಯಾಂಡ್ ಲುಕ್ ನೀಡುತ್ತವೆ.

## ಗೋಟಾ ಫ್ಯಾಬ್ರಿಕ್ ಆಭರಣ

ಮದುವೆಯ ಸಂಭ್ರಮ ಹೆಚ್ಚಿಸಲು ಚಂದದ ಗೋಟಾ ಫ್ಯಾಬ್ರಿಕ್ ಆಭರಣಗಳ ಟ್ರೆಂಡ್ ಹೆಚ್ಚಾಗಿದೆ. ಪ್ರಿ ವೆಡ್ಡಿಂಗ್ ಶೂಟ್, ಅರಿಶಿನ ಶಾಸ್ತ್ರ, ಮೆಹೆಂದಿ, ಮದುವೆ, ರಿಸೆಪ್ಷನ್ ಎಲ್ಲಾ ರೀತಿಯ ಸಮಾರಂಭಗಳಿಗೆ ಗೋಟಾ ಫ್ಯಾಬ್ರಿಕ್ ಆಭರಣಗಳು ಅದ್ಭುತವಾಗಿ ಕಾಣುತ್ತವೆ. ಗೋಲ್ಡನ್ ಗೋಟಾ ಲೇಸ್‌ಗಳನ್ನು ಬಳಸಿ ಮಾಡಲಾದ ಗ್ಲಿಟ್ಟರ್ ಫ್ಯಾಬ್ರಿಕ್ ಆಭರಣಗಳು ಫ್ಯಾಷನ್‌ಪ್ರಿಯರ ಹಾಟ್ ಫೇವರೆಟ್ ಎನಿಸಿವೆ. ಗೋಲ್ಡನ್ ಗೋಟಾ ಲೇಸ್‌ನ ಬಳೆ, ಕಿವಿಯೋಲೆ, ಸೊಂಟದ ಬೆಲ್ಟ್, ಮಾಂಗ್‌ಟೀಕಾ ಬಂಗಾರದಂತೆಯೇ ಹೊಳೆಯುತ್ತವೆ. ಗಾಗ್ರಾ ಚೋಲಿ, ಸಿಲ್ಕ್ ಸೀರೆಗಳಿಗೂ ಮ್ಯಾಚ್ ಮಾಡಲಾಗುತ್ತದೆ.

## ಬ್ರೊಕೇಡ್ ಫ್ಯಾಬ್ರಿಕ್

ಚಂದದ ಮುತ್ತು, ಪಚ್ಚೆ, ಹರಳುಗಳಿಂದ ಕಸೂತಿ ಮಾಡಿದ ಬ್ರೊಕೇಡ್ ಫ್ಯಾಬ್ರಿಕ್ ಆಭರಣಗಳು ಸಖತ್ ಲುಕ್ ಕೊಡುತ್ತವೆ. ಜುಮುಕಿಗಳು, ಬಳೆಗಳು, ಉಂಗುರಗಳು ಟ್ರೆಂಡ್‌ನಲ್ಲಿದೆ. ಫ್ಯಾಬ್ರಿಕ್ ಬೀಡ್ಸ್‌ಗಳನ್ನು ಬಳಸಿ ಲೇಸ್ ಜೊತೆಗೆ ಹೊಂದಿಸಿ ತಯಾರಿಸಲಾದ ಪೆಂಡೆಂಟ್‌ಗಳುಳ್ಳ ಉದ್ದನೆಯ ಸರ ಚೆನ್ನಾಗಿ ಕಾಣಿಸುತ್ತದೆ. ಪ್ರತಿಯೊಂದು ಉಡುಪು ಹೊಲಿದಾಗಲೂ ಮನೆಯಲ್ಲಿ ಒಂದಿಷ್ಟು ಬಟ್ಟೆ ಉಳಿಸಿಕೊಂಡು ನಮ್ಮ ಸೃಜನಶೀಲತೆಯಿಂದ ನಮ್ಮಿಷ್ಟದ ಒಡವೆ ತಯಾರಿಸಿ ಖುಷಿಪಡಬಹುದು. ■

